## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ನಬಾರ್ಡ್ ಆರ್‌ಐಡಿಎಫ್ 22 ರಡಿ ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಕಾಮಗಾರಿಗಳಿಗಾಗಿ ಪ್ರಸಕ್ತ 2017-18ನೇ ಸಾಲಿನಲ್ಲಿ ಎರಡನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶಸಂಖ್ಯೆ:ಗ್ರಾಅಪ:77/1:ಆರ್‌ಆರ್‌ಸಿ: 2016, ದಿನಾಂಕ:09.01.2017.
2. ಸರ್ಕಾರದ ಆದೇಶಸಂಖ್ಯೆ:ಗ್ರಾಅಪ:77/2:ಆರ್‌ಆರ್‌ಸಿ: 2016, ದಿನಾಂಕ:03.04.2017
3. ಸರ್ಕಾರದಆದೇಶ ಸಂಖ್ಯೆ:ಗ್ರಾಅಪ:77/3:ಆರ್‌ಆರ್‌ಸಿ: 2016, ದಿನಾಂಕ:06.04.2017
4. ಆರ್ಥಿಕ ಇಲಾಖೆಯ ಪೂರಕ ಅಂದಾಜು-1ರ ಪತ್ರ ಸಂಖ್ಯೆ:ಆಇ 02 ಪಿಬಿಎಸ್ 2017, ದಿನಾಂಕ: 28.06.207.
5. ಸರ್ಕಾರದ ಆದೇಶಸಂಖ್ಯೆ:ಗ್ರಾಅಪ:110:ಆರ್‌ಆರ್‌ಸಿ:2017, ದಿನಾಂಕ:29.07.2017

**ಪ್ರಸ್ತಾವನೆ:**

ನಬಾರ್ಡ್ ಸಂಸ್ಥೆಯ ನೆರವಿನಡಿ ಆರ್‌ಐಡಿಎಫ್- 22 ರಡಿ ಮೇಲೆ ಓದಲಾದ 1 ರಿಂದ 3 ರ ಸರ್ಕಾರಿ ಆದೇಶಗಳಲ್ಲಿ 194 ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಕಾಮಗಾರಿಗಳಿಗೆ ರೂ.8520.05 ಲಕ್ಷಗಳಿಗೆ ಅನುಮೋದನೆ ನೀಡಲಾಗಿದೆ.

ಜಿಲ್ಲಾ ಪಂಚಾಯತಿಗಳು ಅನುಷ್ಠಾನಗೊಳಿಸುತ್ತಿರುವ ಸದರಿ ಕಾಮಗಾರಿಗಳಿಗಾಗಿ ಪ್ರಸ್ತುತ 2017-18ನೇ ಸಾಲಿನಲ್ಲಿ ಪ್ರಗತಿ ಹೊಂದಿದ ಕಾಮಗಾರಿಗಳ ಬಾಕಿ ಬಿಲ್ಲುಗಳ ತೀರುವಳಿಗೆ ಹಣ ಬಿಡುಗಡೆ ಮಾಡುವಂತೆ ಜಿಲ್ಲಾ ಪಂಚಾಯತಿಗಳು, ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ರವರ ಮುಖಾಂತರ ಬೇಡಿಕೆ ಸಲ್ಲಿಸಿದ ಮೇರೆಗೆ ಪ್ರಸ್ತುತ ಮೇಲೆ ಓದಲಾದ-4ರಲ್ಲಿ 2017-18ನೇ ಸಾಲಿನ ಪೂರಕ ಅಂದಾಜು-1ರ ಲೆಕ್ಕ ಶೀರ್ಷಿಕೆ: 4702-00-101-1-14-436ರಲ್ಲಿರೂ.4000.00 ಲಕ್ಷಗಳ ಅನುದಾನವನ್ನು ಮೇಲೆ ಒದಗಿಸಲಾಗಿದೆ. ನಬಾರ್ಡ-22ರಡಿ ಅನುಮೊದನೆಗೊಂಡ ರೂ.8520.05 ಲಕ್ಷಗಳ ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಕಾಮಗಾರಿಗಳಿಗೆ ಪ್ರತಿಯಾಗಿ ಎರಡನೇ ತ್ರೈಮಾಸಿಕ ಕಂತಿನ ಅನುದಾನ ರೂ.1000.00 ಲಕ್ಷಗಳನ್ನು ಸದರಿ ಮಾಲಿಕೆಯಡಿ ಕೈಗೊಂಡ ಕಾಮಗಾರಿಗಳಿಗೆ ಅನುಬಂಧದಲ್ಲಿರುವಂತೆ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:110/1:ಆರ್‌ಆರ್‌ಸಿ:2017, ಬೆಂಗಳೂರು, ದಿನಾಂಕ:28.08.2017.</u>**

ನಬಾರ್ಡ್ ಆರ್‌ಐಡಿಎಫ್-22ರಡಿಯಲ್ಲಿ ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತಿಗಳು ಕೈಗೆತ್ತಿಕೊಂಡಿದ್ದು, ಪ್ರಗತಿಹೊಂದಿರುವ ಕಾಮಗಾರಿಗಳಿಗಾಗಿ **ರೂ.1000.00 ಲಕ್ಷಗಳನ್ನು** (ರೂಪಾಯಿಗಳ ಒಂದು ಸಾವಿರ ಲಕ್ಷಗಳು ಮಾತ್ರ) ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಲೆಕ್ಕ ಶೀರ್ಷಿಕೆ-4702-00-101-1-14-436 ರಡಿ ಅನುಬಂಧದಲ್ಲಿ ತೋರಿಸಿರುವಂತೆ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ. ಸದರಿ ಬಿಡುಗಡೆ ಮಾಡಿರುವ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವಿನಿಯೋಗಿಸಲು ಆದೇಶಿಸಿದೆ.

**ಷರತ್ತುಗಳು**

1. ಈ ಅನುದಾನವನ್ನು ಅನುಮೋದನೆಯಾದ ನಬಾರ್ಡ್-22ರ ಮಾಲಿಕೆಯ ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಕಾಮಗಾರಿಯ ಹೊರತು ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸಬಾರದು.

2. ಜಿಲ್ಲಾ ಪಂಚಾಯಿತಿಗಳಿಗೆ ನಬಾರ್ಡ್ ಯೋಜನೆಯಡಿ ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಕಾಮಗಾರಿಗಳಿಗೆ ಬಿಡುಗಡೆ ಅನುದಾನವನ್ನು ತುರ್ತಾಗಿ ಒಂದು ವಾರದೊಳಗೆ ಅನುಷ್ಠಾನ ಅಧಿಕಾರಿಗಳಿಗೆ ಮರು ಬಿಡುಗಡೆ ಮಾಡುವುದು.

3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆರವರು ನಬಾರ್ಡ್ ಯೋಜನೆಯ ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು ಹಾಗೂ ಅನುಷ್ಠಾನಗೊಂಡ ಕಾಮಗಾರಿಗಳ ಮರುಪಾವತಿ ಬಿಲ್ಲುಗಳನ್ನು ಕಾರ್ಯಪಾಲಕ ಅಭಿಯಂತರರಿಂದ ಪಡೆದು ಸರ್ಕಾರಕ್ಕೆ ಸಲ್ಲಿಸುವುದು ಮತ್ತು ಸರ್ಕಾರಕ್ಕೆ ಕಾಲಕಾಲಕ್ಕೆ ಪ್ರಗತಿಯ ವರದಿಯನ್ನು ನೀಡತಕ್ಕದ್ದು.

4. ಈ ಕಾರ್ಯಕ್ರಮದಡಿ ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನದಲ್ಲಿ ಭರಿಸಿದ ವೆಚ್ಚಕ್ಕೆ ಅನುಗುಣವಾಗಿ ನಬಾರ್ಡ್ ಮರುಪಾವತಿ ಕ್ಲೈಮ್ ಬಿಲ್ಲುಗಳನ್ನು ಒಂದು ತಿಂಗಳೊಳಗೆ ಸಲ್ಲಿಸತಕ್ಕದ್ದು.

5. ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿಯನ್ನು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರಿಗೆ ಒದಗಿಸತಕ್ಕದ್ದು.

6. ಕಾಮಗಾರಿಗಳ ವಿವರವನ್ನು ನಬಾರ್ಡ್‌ನ ನಿಯಮಗಳಂತೆ ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ಹಾಗೂ ಕಾಮಗಾರಿಗಳನ್ನು ನಡೆಸುತ್ತಿರುವ ಸ್ಥಳಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು, ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ವಿವರಗಳನ್ನು ಬರೆಸುವ ಜವಾಬ್ದಾರಿ ಆಯಾ ಜಿಲ್ಲಾ ಪಂಚಾಯತಿಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳದ್ದಾಗಿರುತ್ತದೆ.

7. ಬಳಕೆಯಾದ ಹಣ ಕುರಿತಂತೆ ಈ ಯೋಜನೆಯಡಿಯ ಎಲ್ಲಾ ಕಾಮಗಾರಿಗಳ Project Completion Report ನ್ನು ಸರ್ಕಾರಕ್ಕೆ ಹಾಗೂ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಒದಗಿಸತಕ್ಕದ್ದು.

8. ಈ ಯೋಜನೆಯ ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿದ ಬಳಿಕ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿ ಮಾಡುವುದು ಕಡ್ಡಾಯವಾಗಿರುತ್ತದೆ.

9. ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿದ ಹಣವನ್ನು ಜಿಲ್ಲಾ ಖಜಾನೆಯು ಪ್ರಸ್ತುತ ವರ್ಷಕ್ಕೆ ನಿಗಧಿಗೊಳಿಸುವ ದಿನಾಂಕದೊಳಗೆ ಡ್ರಾ ಮಾಡಿ ವಿನಿಯೋಗಿಸತಕ್ಕದ್ದು.

10. ಜಿಲ್ಲಾ ಪಂಚಾಯತಿಗಳು ಮುಂದಿನ ತ್ರೈಮಾಸಿನ ಕಂತಿನ ಅನುದಾನ ಬಿಡುಗಡೆ ಬೇಡಿಕೆ ಸಲ್ಲಿಸುವ ಮುನ್ನ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಶೇಕಡ 75ರಷ್ಟು ವೆಚ್ಚ ಕಡ್ಡಾಯವಾಗಿ ಭರಿಸತಕ್ಕದ್ದು, ಇಲ್ಲದಿದ್ದಲ್ಲಿ ಮುಂದಿನ ಕಂತಿನ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಕಂಡಿಕೆ ಟಿಪ್ಪಣಿ ಸಂಖ್ಯೆ: ಗ್ರಾಅಪ:252:ಪಿಬಿಸ್:2017, ದಿನಾಂಕ:22.07.2017ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು

2. ಮಹಾಲೇಖಪಾಲರು (ಆಡಿಟ್-1 ಮತ್ತು 2) ಕರ್ನಾಟಕ, ಬೆಂಗಳೂರು
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ರವರ ಆಪ್ತ ಕಾರ್ಯದರ್ಶಿಗಳು. ಬೆಂಗಳೂರು.
4. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಪಿಎಂಯು) (ಐಎಫ್) 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ, ಕಟ್ಟಡ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.
9. ವಿಶೇಷಾಧಿಕಾರಿಗಳು, (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಕರ್ನಾಟಕ ವಿಧಾನ ಸಭೆಯ ಮಾನ್ಯ ವಿರೋದ ಪಕ್ಷದ ನಾಯಕರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
12. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
13. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
14. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
15. ಅಧೀನ ಕಾರ್ಯದರ್ಶಿ, ವೆಚ್ಚ-6, ಜಿ.ಪಂ, ಆರ್ಥಿಕ ಇಲಾಖೆ, ಬೆಂಗಳೂರು.
16. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.-9.
17. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
18. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು.
20. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು.
21. ವೈಬ್‌ಸೈಟ್/ಮಾಹಿತಿಕೇಂದ್ರ-(10 ಪ್ರತಿಗಳು), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.
22. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಅನುಬಂಧ

ನಬಾರ್ಡ್ ಆರ್‌ಐಡಿಎಫ್-22ರಡಿ ಪ್ರಗತಿ ಹೊಂದಿದ ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಜಿ.ಪಂ.ಗಳಿಗೆ 2015-16ನೇ ಸಾಲಿನ ಲೆಕ್ಕಶೀರ್ಷಿಕೆ-4702-00-101-1-14-436ರಡಿ ಎರಡನೇ ತ್ರೈಮಾಸಿಕ ಕಂತಿನ ಬಿಡುಗಡೆ ಮಾಡಿದ ಅನುದಾನದ ವಿವರ

ಸರ್ಕಾರದ ಆದೇಶ ಸಂ:ಗ್ರಾಅಪ:110/1:ಆರ್‌ಆರ್‌ಸಿ:2017, ಬೆಂಗಳೂರು ದಿ:28-8-2017ರ ಲಗತ್ತು

(ರೂ.ಲಕ್ಷಗಳಲ್ಲಿ)

| ಕ್ರ ಸಂ: | ಜಿಲ್ಲಾ ಪಂಚಾಯತ್ | ಆಡಳಿತಾತ್ಮಕ ಅನುಮೋದನೆ ನೀಡಿದ ಮೊತ್ತ | 2017-18 ನೇ ಸಾಲಿನಲ್ಲಿ ಹಂಚಿಕೆ | ಈಗಾಗಲೇ ಬಿಡುಗಡೆ ಮಾಡಿದ ಅನುದಾನ | ಈ ಆದೇಶದಂತೆ ಪ್ರಸ್ತುತ 2017-18ನೇ ಸಾಲಿಗೆ ಎರಡನೇ ಕಂತಿನಲ್ಲಿ ಬಿಡುಗಡೆ ಮಾಡಿದ ಅನುದಾನ |
|---|---|---|---|---|---|
| 1 | 2 | 3 | 4 | 5 | 6 |
| 1 | ಬಾಗಲಕೋಟೆ | 307.00 | 150.00 | 50.00 | 0.00 |
| 2 | ಬೆಂಗಳೂರು (ಗ್ರಾ) | 40.00 | 15.00 | 0.00 | 0.00 |
| 3 | ಬೆಂಗಳೂರು (ನ) | 55.00 | 25.00 | 10.00 | 15.00 |
| 4 | ಬೆಳಗಾಂ | 1635.00 | 1100.00 | 50.00 | 300.00 |
| 5 | ಬಳ್ಳಾರಿ(ಹಡಗಲಿ) | 176.00 | 60.00 | 30.00 | 20.00 |
| 6 | ಬೀದರ್ | 425.60 | 150.00 | 30.00 | 30.00 |
| 7 | ವಿಜಯಪುರ | 347.00 | 150.00 | 30.00 | 20.00 |
| 8 | ಚಿಕ್ಕಬಳ್ಳಾಪುರ | 25.00 | 10.00 | 10.00 | 0.00 |
| 9 | ಚಿಕ್ಕಮಗಳೂರು | 230.00 | 100.00 | 25.00 | 0.00 |
| 10 | ಚಿತ್ರದುರ್ಗ | 191.00 | 70.00 | 30.00 | 10.00 |
| 11 | ದಕ್ಷಿಣ ಕನ್ನಡ | 435.00 | 200.00 | 50.00 | 30.00 |
| 12 | ದಾವಣಗೆರೆ | 344.00 | 80.00 | 25.00 | 55.00 |
| 13 | ಧಾರವಾಡ | 339.35 | 150.00 | 50.00 | 25.00 |
| 14 | ಗದಗ | 1049.00 | 670.00 | 150.00 | 220.00 |
| 15 | ಕಲಬುರಗಿ | 311.00 | 110.00 | 50.00 | 10.00 |
| 16 | ಹಾಸನ | 292.80 | 90.00 | 30.00 | 60.00 |
| 17 | ಹಾವೇರಿ | 252.60 | 150.00 | 50.00 | 0.00 |
| 18 | ಕೊಪ್ಪಳ | 220.00 | 50.00 | 25.00 | 25.00 |
| 19 | ಮಂಡ್ಯ | 278.60 | 100.00 | 25.00 | 10.00 |
| 20 | ಮೈಸೂರು(ಕೆ.ಆರ್.ನಗರ) | 140.00 | 50.00 | 50.00 | 0.00 |
| 21 | ರಾಯಚೂರು | 375.00 | 100.00 | 50.00 | 0.00 |
| 22 | ರಾಮನಗರ | 50.00 | 20.00 | 10.00 | 10.00 |
| 23 | ಶಿವಮೊಗ್ಗ | 174.60 | 70.00 | 25.00 | 0.00 |
| 24 | ತುಮಕೂರು | 503.50 | 190.00 | 80.00 | 110.00 |
| 25 | ಉಡುಪಿ | 130.00 | 50.00 | 25.00 | 0.00 |
| 26 | ಉತ್ತರ ಕನ್ನಡ | 55.00 | 30.00 | 15.00 | 15.00 |
| 27 | ಯಾದಗಿರಿ. | 138.00 | 60.00 | 25.00 | 35.00 |
| | ಒಟ್ಟು | **8520.05** | **4000.00** | **1000.00** | **1000.00** |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಡಾ.ಬೂವನಹಳ್ಳಿ ನಾಗರಾಜ್)
ನಿರ್ದೇಶಕರು ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.